SATYAVADI— Oldest Newspaper of Mysore
Reg No. M 1299
Weekly

ಸತ್ಯವಾದಿ

ಸಂಪುಟ 26 ಸಂಚಿಕೆ 291] ಮಂಗಳವಾರ 27—4—1943 [3 ಸೈ

ವಿವಿಧ ವರ್ತಮಾನ

ಜರ್ಮನಿ, ಇಟಲಿ, ಜಪಾನ್, ಇವು ಮೂರೂ ತಮ್ಮಲ್ಲಿದ್ದ ಶಕ್ತಿ (ಸಿಪಾಯಿ)ಯನ್ನು ರಣರಂಗಕ್ಕೆ ಬಿಟ್ಟಿರುತ್ತಾರೆ

ಮೇ 1 ರಿಂದ ಮದರಾಸಿನಲ್ಲಿ ಯಾರ ಮನೆಯಲ್ಲಿ ಎಲೆಕ್ಟ್ರಿಕ್ ದೀಪ ಇಲ್ಲವೋ ಆಂಥ ಪ್ರತಿ ಸಂಸಾರಕ್ಕೂ ತಿಂಗಳಿಗೆ ಎರಡೂವರೆ ಶೇರ್ ಸೀಮೆ ಎಣ್ಣೆ ಕೊಡಲಾಗುವುದು.

ಪ್ಯಾರಿಸ್ಸಿನ ಗೂಡೆಯ ಮೇಲೆ 'ಜಿ ಮತ್ತು ಜಿ = ಜಯ' ಎಂದು ಬರೆದಿದ್ದಕ್ಕೆ 30 ಫ್ರೆಂಚ್ ಗಂಡಸರೂ 10 ಹೆಂಗಸರೂ ಗುಂಡಿನ ಬಾಯಿಗೆ ತುತ್ತಾದರು. ಜಿ ಅಂದರೆ ಡಿಗಾಲ್ ಮತ್ತು ಜೀರೋ.

ಡಾ॥ ಜೀನ್ಸ್‌ರವರು ಲಂಡನ್ನಿನಲ್ಲಿ ಮಾತನಾಡುತ್ತಾ— ಜುಗೋಸ್ಲೋ ವಿಯನ್ನು ರೇ ಸಿದ್ಧ ಮಾಡಬೇಡಿ; ಫಿಕ್ ಲೆಂಡಿನವರು ದಂಗೆ ಏಳಲು ಸಿದ್ಧರಾಗಿರುವರು; ಇನ್ನೇನು ಮಿತ್ರಪಕ್ಷದವರು ಸಹಾಯಕ್ಕೆ ಬರುವರು ಎಂದು ಹೇಳಿರುವರು.

ಸ್ವೀಡನ್ ಸರಕಾರವು ಜರ್ಮನಿಯವರು ತಮ್ಮ ಎಲ್ಲೆಯಲ್ಲಿ ವೈನುಗಳನ್ನು ಹಾಕಬಾರದೆಂದು ಎಚ್ಚರಿಸಿದೆ. ಜರ್ಮನರು ಅವರ ಎಲೆಯಿಂದಾಚೆ ಅಂದರೆ 3 ಮೈಲಿಯೊಳಗಲ್ಲವೆಂದು ಉತ್ತರ ಕೊಟ್ಟದ್ದು ಸ್ವೀಡನ್ನಿಗೆ ತೃಪ್ತಿಕರವಾಗಿಲ್ಲ.

ಸಿಂಹಳ ದ್ವೀಪದಲ್ಲಿ ಮೇ 3 ರಿಂದ ಈಗಕೊಡುತ್ತಿರುವ ಅಕ್ಕಿ ರೇಷನಿಂಗ್ ದ್ವಿಗುಣ ಮಾಡಿರುವರು. ಅರ್ಧಪಷ್ಟು ಅಕ್ಕಿ, ಇನ್ನರ್ಧದಷ್ಟು ಗೋಧಿ. ಈಗ ದಿವಸಕ್ಕೆ 100 ಟನ್ ಗೋಧಿ ಪಿಚ್ಚಾಗುತ್ತಿದೆ ಹಿಂದೆ ತಿಂಗಳಿಗೆ 4000 ಟನ್ ಗೋಧಿ ಉಪಯೋಗಿಸುತ್ತಿದ್ದರು

ಫೆಡರಲ್ ಕೋರ್ಟಿನ ತೀರ್ಮಾನಕ್ಕೆ ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ 2ಗ ನೇ ಕಲಂಗೆ ಒಂದು ತಿದ್ದುಪಡಿಯನ್ನು ತಂದು ಮಾತುಗಳ ಜಮಾವಣೆಯನ್ನು ಸರಿಪಡಿಸುವುದೆಂದೂ, ಆದಕ್ಕಾಗಿ ಗಾಂಧೀಜಿಯವರನ್ನು ಬಿಡುವ ಸಂದರ್ಭವಿಲ್ಲವೆಂದೂ, ಲಂಡನ್ ಇಂಡಿಯಾ ಆಫೀಸು ಪ್ರಕಟಣೆ ಹೊರಟಿರುತ್ತೆ.

ಫೆಡರಲ್ ಕೋರ್ಟ್ ಜಡ್ಜ್‌ಮೆಂಟಿನ ಮೇಲೆ ಸರ್ ತೇಜ ಬಹದ್ದೂರ್ ಸಪ್ರೂರವರು, ಛೀಫ್ ಜಸ್ಟಿಸರನ್ನು ವಂದಿಸಿ, ಸರ್ ಗ್ವಯರವರ ಒಂದು ಜಡ್ಜ್‌ಮೆಂಟು ಮಿ॥ ಎನೆರಿಯವರ 10ನೆ ಭಾಷಣಕ್ಕೆ ಸರಿಯಾಗುವುದು; ಮತ್ತು ಇಂಗ್ಲೆಂಡ್ ಪ್ರತಿನಿಧಿಯಿಬ್ಬರೊಬ್ಬರು ಇರಿಯಾದಲ್ಲಿದ್ದು ಸರ್ಕಾರದವರು ಮಾಡುವ ತಪ್ಪನ್ನು ತಪ್ಪುಮಾಡಿದಾಗಿ ತೋರಿಸಲವಕಾಶವಾಗುತ್ತಿದೆಯೂ ತಿಳಿಸಿರುವರು.

ಕೆನಡಾ ಪ್ರಧಾನ ಮಂತ್ರಿ ಮಿ॥ ಮೆಕೆಂಜಿಕಿಂಗ್ಸ್ ರವರು ಮೇಜರ್ ಜನರಲ್ ಸಿಡ್ನಿಮರನ್ನು ಕಳಿಸಿರುತ್ತಾರೆ. ಇವರ ಬರುವ ಉದ್ದೇಶ ಹಿಂದೂಸ್ಥಾನ ಚೈನಾದ ವಿಷಯವನ್ನು ವಿವರವಾಗಿ ತಿಳಿದುಕೊಂಡು ಬರಬೇಕೆಂಬುದೇ ಆಗಿರುವಂತೆ ಇವರು ಮುಖಂಡರನ್ನೆಲ್ಲಾ ನೋಡುವರು, ಈಗ ಸರ್ ತೇಜ ಬಹದ್ದೂರ್ ಸಪ್ರೂರವರನ್ನು ಕಂಡು ದೀರ್ಘಕಾಲ ಮಾತನಾಡಿದರು. ಕಳೆದ ವಾರ ಇವರು ಬೊಂಬಾಯಿನಲ್ಲಿನ ಗಣ್ಯರೊಡನೆ ಮಾತುಕತೆ ನಡೆಸಿದರು, ದೆಹಲಿಯಲ್ಲಿ ಮಿ॥ ಜಿನ್ನೈರವರನ್ನು ನೋಡುತ್ತಾರೆ. ಇವರೆಲ್ಲ ಈ ದೇಶದಲ್ಲಿನ ಕೋಮುವಾರು ಪ್ರಶ್ನೆಗೆ ಪ್ರಾಶಸ್ತ್ಯವನ್ನು ಕೊಟ್ಟಿರುತ್ತಾರಂತೆ.

ಗೀತಾಂಜಲಿ ಪುಸ್ತಕವು ಪ್ರಕಟವಾದ ಕೂಡಲೇ ಇಂಗ್ಲೆಂಡಿನ ಆಸ್ಥಾನ ಕವಿಯೂವ ರಾಬರ್ಟ್‌ಬ್ರಿಡ್ಜ್‌ಫಾಕ್ಸ್‌ಬಂಗ್ ಮೊದಲಾಗಿ ಇತರ ಕವಿಗಳು ಕವಿ ಟಾಗೋರರಿಗೆ ಆಕ್ಸ್‌ಫರ್ಡ್ ಡಿಗ್ರಿಕೊಡಿಸಬೇಕೆಂದರು, ಆಗ ಆ ವಿಶ್ವವಿದ್ಯಾನಿಲಯಕ್ಕೆ ಲಾರ್ಡ್ ಕರ್ಜನರು ಛಾನಸೆಲರಾಗಿದ್ದರು. ಬಂಗಾಳಿ ವಿಭಾಗದಲ್ಲಿ ಟಾಗೋರು ಮನೆತನ ಸರಿಗೂ ಕರ್ಜನರಿಗೂ ಮನಸ್ತಾಪವುದ್ದರಿಂದ ತಮ್ಮ ಸೇಡನ್ನು ಡಿಗ್ರಿಕೊಡದೆ ತೀರಿಸಿಕೊಂಡರು. ಕವಿ ಈಟ್ಸ್‌ರವರು ಟಾಗೋರರೊಡನೆ ಸ್ನೇಹ ಭಾವದಿಂದಿದ್ದರೂ, ಕಡೆಗೆ ಟಾಗೋರರು ಬಂಗಾಳಿ ಭಾಷೆಯಲ್ಲಿ ಬರೆಯದೆ ಇಂಗ್ಲೀಷಿನಲ್ಲಿ ಒರೆಯ ತೊಡಗಿದುದಕ್ಕೆ ಅತೃಪ್ತಿಪಟ್ಟರು. ಈ ಗುಟ್ಟನ್ನು ಸರ್ ವಿಲಿಯಂ ರಾಥೆನ್‌ಸ್ಟೈನ್‌ರವರು ಈಗ ಹೊರಗೆಡವಿರುವರಲ್ಲದೆ, ತಾವೂ ಕೂಡ ಟಾಗೋರರು ಗೀತಾಂಜಲಿಯನ್ನು ಪ್ರಕಟಿಸಿದ ಮೇಲೆ ಇಂಗ್ಲೀಷಿನಲ್ಲಿ ಬರೆಯುತ್ತಾ ಬಂದುದರಿಂದ ತಮ್ಮ ಹೆಸರು ಕಳೆದು ಹೋಯಿತೆಂದಿರುವರು.

ಡಿಫೆನ್ಸ್ ರೂಲ್ 26 ನರಿಪಡಿಸಲು ಹೊಸ ಆರ್ಡಿನೆನ್ಸ್

ಫೆಡರಲ್ ಕೋರ್ಟಿನ ತೀರ್ಮಾನದ ಮೇಲೆ ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ ರೂಲ್ 26 ಕ್ಕೆ ವೈಸರಾಯರು ಒಂದು ಆರ್ಡಿನೆನ್ಸ್ ತರುವನರಿದ್ದಾರೆ. ಇದರಿಂದ ಕೋರ್ಟಿನ ತೀರ್ಮಾನದ ಜಾರಿಯಾಗುವ ಹಾಗಿಲ್ಲ.

ನೊವಂರಾಸಸ್ಕ್‌ಗೆ ಸಮೂಪದಲ್ಲಿ ರಷ್ಯನರು ಹೇರಳವಾಗಿ ಜಮಾವಣೆ ಮಾಡುತ್ತಿರುವರು. ಗೊರಿಲ್ಲ ಯುದ್ಧ ನಡೆಯುತ್ತಿರುವುದು.

ಜರ್ಮನಿಯರು ನಾಜಿಗಳು ಸೋಲುತ್ತಿರುವರೆಂದು ಭಯಪಟ್ಟಿರುವರು.

ಖಾರ್ಕಾಲದಲ್ಲಿ ರಷ್ಯಾ ವೈನಾನಿಕರು ರಷ್ಯನರಿಗೆ ಸಹಾಯಮಾಡಲು ಹೋಗಿದ್ದವರು ಪ್ರಾಷಸ್ ಇಂಗ್ಲೆಂಡಿಗೆ ಬಂದರು.

ರಷ್ಯಾ ಸರ್ಕಾರದವರು ಪೋಲಿಷ್ ಸರ್ಕಾರದೊಡನೆ ಸಂಬಂಧ ತ್ಯಜಿಸಿರುತ್ತಾರೆ.

ರಷ್ಯಾದಲ್ಲಿ ಅಲ್ಪ ಕದನಗಳು ಮಾತ್ರ ನಡೆದಿದೆ. ಕ್ಯೂಬನ್ನಿನಲ್ಲಿ ಶತ್ರು ರಭಸ ಕಮ್ಮಿಯಾಗಿದೆ ಹೋದ ವಾರ ಜರ್ಮನಿಯ 381 ವಿಮಾನಗಳು ನಾಶವಾಗಿವೆ. ಕುರ್ಸ್ಕ್ ರಂಗದಲ್ಲಿ 55 ಶತ್ರು ಟ್ಯಾಂಕುಗಳು ನಾಶವಾಗಿರುವುವು.

ಮೊನ್ನೆ ಬೆಲ್ಜಿಯಂ ಮತ್ತು ಫ್ರಾನ್ಸ್ ಮೇಲೆ ಬ್ರಿಟಿಷ್ ವಿಮಾನ ಧಾಳಿಯಾಗಿ ರೈಲ್ವೆಗಳೂ ನೀರಸ ಕಟ್ಟೆಗಳೂ ಹಾಳಾದುವು.

ಟ್ಯುನಿಷಿಯಾದಲ್ಲಿ ಯುದ್ಧವು ಭೀಕರವಾಗಿ ನಡೆಯುತ್ತಿರುವುದು. ರಕ್ತಪ್ರವಾಹವು ಹರಿಯುತ್ತಿದೆಯುವುದು.

ನ್ಯೂಗಿನಿಗೆ ಈತ್ತರದಲ್ಲಿ 300 ಮೈಲಿ ದೂರದಲ್ಲಿರುವ ವಿವಾಕ್ ಕಡೆ ಜಪಾನ್ ದೊಡ್ಡ ಕಾರ್ಯವಾಯ ಹೋಗುತ್ತಿರುವುದು ತಿಳಿಯಬರುತ್ತದೆ. ಇದು ವಿಮಾನಕ್ಷೇತ್ರದವರ ಬಾಂಬಿನ ಗುರಿಗೆ ಬೀಳಲಾರದಷ್ಟು ದೂರದಲ್ಲಿದೆ.

ಬೈನಾದಲ್ಲಿ ಲಾಜ್‌ವಾಲ್ ತ್ಯಜಿಸಿದರು. ಇದು ಹಾಂಕೋಪ್ಪಕ್ಕೆ ರೈಲ್ವೆ ರಸ್ತೆಯಲ್ಲಿ ಸಜ್ಜಿವಕ್ಕೆ 50 ಮೈಲಿ ದೂರದಲ್ಲಿದೆ. ಇದು ಬೆಟ್ಟದಲ್ಲಿ ಮುಖ್ಯವಾದ ನಗರ.

ಜಿಂಟಾನ್ ವಿಮಾನಗಳು ಕೆಲಬಂದರನ್ನು ನಿರ್ನಾಮ ಮಾಡಿತು.

ವಿವಾಹ ಮಹೋತ್ಸವ

ಸಿಕಂದರಾಬಾದಿನಲ್ಲಿರುವ ರಾವ್ ಸಾಹೇಬ್ ವಕೀಲ್ ಬಿ. ಕೆ. ರಾಮಾನುಜಯಂಗಾರ್ಯರು ತಮ್ಮ ಅಣ್ಣಂದಿರು ಲೇಟ್ ದಡದಹಳ್ಳಿ ಬಿ. ಸಿ. ಅನಂತರಾಮಯ್ಯಂಗಾರ್ಯರ ಪುತ್ರಿ ಸೌಭಾಗ್ಯವತಿ ವತ್ಸಲಳನ್ನು ಪೊನ್ನಾಥಪುರದಲ್ಲಿಂದ ರಾ॥ ಸ್ಕೂಲ್ ಮಾಸ್ಟರ್ ವಿ॥ ಶ್ರೀನಿವಾಯ್ಯಂಗಾರ್ಯಂ ಪುತ್ರ ಚಿ॥ ರಾ॥ ಪಿ. ಎಸ್. ನರಸಿಂಹಯ್ಯಂಗಾರ್ಯರಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ಕಳೆದ ಭಾನುವಾರ ನೆರವೇರಿಸಿದರು. ಒಂಭುನಿತ್ತರನೇಕರು ದಯಮಾಡಿಸಿ ವಧೂ ವರರನ್ನು ಆಶೀರ್ವದಿಸಿದರು ವಧುವಿನ ಸಹೋದರರಾದ ಅಡ್ವೊಕೇಟ್ ಶ್ರೀ ಬಿ. ಎ. ಕೃಷ್ಣಸ್ವಾಮಯ್ಯಂಗಾರ್ಯರು ಆಶ್ವಾನಿತರನ್ನು ಸತ್ಕರಿಸಿದರು.

ಭಂಗಾರ ಬೆಳ್ಳಿ ಧಾರಣೆ

ಸವರ್ನ	ರೂ.	70—12—0
ಬಂಗಾರ ತೊಲ	ರೂ.	98—8—0
ಬೆಳ್ಳಿ	,,	1—8—3

ಹರಿಶ್ಚಂದ್ರ

— ಲೇಖಕರು —
ಎಸ್. ವಿ. ಕೃಷ್ಣಸ್ವಾಮಿ

ಕನ್ನಡ [illegible] ಚಿತ್ರವನ್ನು ರಜತ ಪರದೆಯ ಮೇಲೆ ಮೂರನೆ ಬಾರಿ ಸ್ಕ್ರೀನಿಗೆ [illegible] ಎಸ್. ಎಸ್. ಏಸ್ಟರ್ ನಾಟಕ ಮಂಡಲಿಯವರ ಎರಡನೆಯ ಕಲಾಕೃತಿ [illegible] ಚಿತ್ರವು ಚಾಸ್ತಿ ಆಗದಿದ್ದಲ್ಲದೆ ಕೇವಲ [illegible] ದು ನಾವು [illegible] ಪ್ರಯತ್ನಕ್ಕೆ ಧನ್ಯವಾದಗಳು. ಹಾಡುಗಳಿಂದ ಮೋಹಕ ಗೀತೆಗಳಿಲ್ಲದಿದ್ದರೂ ಎನ್ನುವ ಬೇಕೂ ಎನ್ನುವ ಮಾತ್ರ ಸಂಗೀತ ಜೋಡಿಸಿದ್ದಾರೆ. ಪಾತ್ರದಲ್ಲಿ ಶ್ರೀ ಸಚ್ಚಿದಾನಂದಯ್ಯನವರು ಹರಿಶ್ಚಂದ್ರನ ಸ್ಥಾತ್ವವನ್ನು ಚೆನ್ನಾಗಿಯೆ ಅಭಿನಯಿಸಿದ್ದಾರೆ. ಶ್ರೀಮತಿ ಲಕ್ಷ್ಮಿ ಕ್ಷೀಜಾಯಿಯವರು ಚಂದ್ರಮತಿಯ ಪಾತ್ರವನ್ನು ಶಿಷ್ಟಗರ್ಭಿತವಾಗಿ ಅಭಿನಯಿಸಿದ್ದಾಳೆ. ಚಿತ್ರವು ಎಡೆಎಡೆ ಸರಣಿಯು ಜೆನ್ನಾಗಿ ಮುಂದುವರಿಯುವುದರಿಂದ ಪ್ರೇಕ್ಷಕರಿಗೆ ಬೇಜಾರಾಗುವುದಿಲ್ಲ. ವಿಶ್ವಾಮಿತ್ರನ ಪಾತ್ರದಲ್ಲಿ ನಾಗೇಂದ್ರ ರಾಯರು ಜೆನ್ನಾಗಿ ಅಭಿನಯಿಸಿದ್ದರೂ ಹರಿಶ್ಚಂದ್ರನೊಡನೆ ಶಪಥವಾಹುವ ಕಾಲದಲ್ಲಿ ಅತನ ವಾದದ ವೈಖರಿಯು ಅಷ್ಟು ಜೋರಾಗಿಲ್ಲ. ಇನ್ನೂ ಸ್ವಲ್ಪ ಖಾದದ ಸೂಚಿಯು ಸೇರಿಸಿದ್ದರೆ ಜೆನ್ನಾಗಿತ್ತು. ಲೋಹಿತಾಶ್ವನನ್ನು ಸ್ಮಶಾನಕ್ಕೆ ಹೊತ್ತು ತಂದು ಚಂದ್ರಮತಿ ಅತಿಯಾಗಿ ಶವದ ಮೇಲೆ ಬಿದ್ದು ಬಿದ್ದು ಳಿಳುವ ಸಮಯದಲ್ಲಿ ಅಕೆಗೆ ಅಲ್ಲಿ ಒಂದು ಹಾಡನ್ನು ಕೊಟ್ಟು ಹಾಡಿಸಿರುವುದು ಜೆನ್ನಾಗಿಲ್ಲ. ಈ ಪ್ರಪಂಚದ ಅಶ್ಚರ್ಯವೆಲ್ಲಾ ತೊರೆದು ಮಗನ ಮರಣದಿಂದ ಅಕೆಯು ಕಂಗೆಟ್ಟು ದಿಕ್ಕು ಕಾಣಲಾರದವಳಾಗಿ ಪತಿಯನ್ನು ಅಗಲಿ ಅಕೆಗೆ ಮುಂದಿನ ಮಾರ್ಗ ತೋರದೆ ರೋದಿಸುತ್ತಿರುವಾಗ ಅಕೆಗ ಅಲ್ಲಿ ಹಾಡಿಸಿರುವುದು ಸರಿಯಲ್ಲ. ಅದು ಒದಲು ಮಾತಿನ ವೈಖರಿ ಮತ್ತು ಶೋಕದ ಛಾಯೆ ಇನ್ನೂ ಅತಿಯಾಗಿ ತೋರಬಹುದಾಗಿತ್ತು. ಈಗಲೇ ಅಕೆಯು ಪಾತ್ರವನ್ನು ಹೃದಯಂಗಮವಾಗಿ ಅಭಿನಯಿಸಿದ್ದಾಳೆ. ಪ್ರೇಕ್ಷಕರು ತಂಡವು ಅಕೆಯು ಅಭಿನಯಿಸುವುದನ್ನು ನೋಡಿ ಧಾರಾಕಾರವಾಗಿ ಕಣ್ಣೀರಲ್ಲಿ ನೀರು ಸುರಿಸಿದ್ದಾರೆ. ಭಗವಿನಿಯೆಂಬುದಕ್ಕೆ ಅಳವಡಿಸಲೇ ಇಲ್ಲ. ನಕ್ಷತ್ರಿಕನ ಪಾತ್ರ ಸಾಲದು. ಅತನು ಹರಿಶ್ಚಂದ್ರನಿಗೆ ತನ್ನ ಹೆಸರಿಗೆ ತಕ್ಕಂತಾಗಿ ಅಭಿನಯನ ಕಷ್ಟವನ್ನು ಕೊಡದೆ ಒಂದು ತರಹ ತಮಾಷೆಯಲ್ಲಿ ಅಭಿನಯಿಸಿದ್ದಾನೆ. ವಿಶ್ವಾಮಿತ್ರನ ಹಣ ಹೊಡತಿ ಮಾರಿ ಬಂಡುವರಿಂದ ವಿಶ್ವಾಮಿತ್ರನು ನನಗೆ ಒರಬೇಕಾಗಿದ್ದುದು ಬಾಕಿ ನಿನಗೆ ಇಷ್ಟು ದಿನ ಕಷ್ಟಪಡಿಸಿದ್ದಕ್ಕಾಗಿ ಪರಿಹಾರ ದ್ರವ್ಯವನ್ನು ಕೇಳಿ ವಸೂಲು ಮಾಡು ಎಂದು ನಕ್ಷತ್ರಿಕನಿಗೆ ಹೇಳಿ ಕಳುಹಿಸಿದಾಗ ಅತ ಹೋದವನು ಬಹಳ ಹೊತ್ತು ಚಿಂತಾಕ್ರಾಂತನಾದ ಹರಿಶ್ಚಂದ್ರನು ಎಚ್ಚೆತ್ತುಕೊಳ್ಳುವನಂಗೂ ಸುಮ್ಮನಿದ್ದು ನಂತರ ಕನಿಕರದಿಂದ ಗುರುಸೇನ ವಾರ್ತೆಯನ್ನು ಪಾಲಿಸುತ್ತಾನೆ.

ಒಟ್ಟಿನಲ್ಲಿ ಚಿತ್ರವು ಜೆನ್ನಾಗಿದೆ. ಕಥೆ ಪುರಾಣವ ಕಥೆಯಾದರೂ, ಎಲ್ಲರಿಗೂ ತಿಳಿದ ಕಥೆಯಾದರೂ ಜನರಿಗೆ ಹಿಡಿಸುತ್ತೆ ಸರ್ವರೂ ನೋಡಬಹುದಾಗಿದೆ. ಈ ಚಿತ್ರದಿಂದ ಮಜುಂ ಖಾನನು ಅಭಿನಯಂಗದಿಂದ ದಿಗ್ದರ್ಶಕನಾದಂತೆ ನಮ್ಮ ಆರ್. ನಾಗೇಂದ್ರರಾಯರೂ ದಿಗ್ದರ್ಶಕತ್ವದಲ್ಲಿ ಒಂದು ಅಡಿಯಿಟ್ಟಿದ್ದಾರೆ. ಸ್ಟುಡಿಯೋ ಮುಖವನ್ನೇ ನೋಡದ ವ್ಯಕ್ತಿಗಳು ಈಗ ಚಿತ್ರ ದಿಗ್ದರ್ಶಿಸುತ್ತಿರುವಾಗ ಅರಿತ ನುರಿತ ನಟರೂ, ಅನೇಕ ವರ್ಷಗಳ ಕಾಲ ರಂಗ ಮಂಟಪದ ಮೇಲೆ ಕಾಣಿದು ತಿಳಿದಿರುವ ನಾಗೇಂದ್ರ ರಾಯರು ದಿಗ್ದರ್ಶಕರಾದರೆ ಅದರಲ್ಲಿ ವಿಶೇಷ ಯೋಕಿ, ಏನೂ ಇಲ್ಲ. ಛಾಯಾಗ್ರಹಣ ಸಾಧಾರಣವಷ್ಟೆ. ಶಬ್ದ ಗ್ರಹಣ ಸಂಪರ್ಕವಾಗಿಲ್ಲ. ಹೆಂಗಸರೂ ಗಂಡಸರೂ ಅದಿಯಾಗಿ ನೋಡುವ ಚಿತ್ರ. ಈ ಕಲಿಯುಗದಲ್ಲಿ ಸತ್ಯವೇ ಮಾಯವಾಗಿ ಬರಿ ಅಸತ್ಯದ ಯುಗವಾಗಿರುವಾಗ ಸತ್ಯ ಶೋಧನೆ ಚಿತ್ರವನ್ನು ತಂದು ಸತ್ಯವೇ ಜಯಂ ! ಎಂಬ ನಾಣ್ಣುಡಿಯನ್ನು ಸಿದ್ಧಾಂತಪಡಿಸಲು ಹೊರಟಿರುವ "ಸತ್ಯಶೋಧನೆ."

ದಕ್ಷಿಣ ಆಫ್ರಿಕಾ—ನೇಟಾಲ್ ಮತ್ತು ಟ್ರಾನ್ಸ್‌ವಾಲುಗಳಲ್ಲಿ ಭಾರತೀಯರು ಜಮೀನು ಕೊಳ್ಳುವುದನ್ನು ನಿಷೇಧಿಸುವ ವಸೂದೆಯು 3 ನೆ ಸಲವೂ ಅಂದರೆ ಅಖೈರ್ ಸೆನೆಟ್ಟಿನಲ್ಲಿ ಅಂಗೀಕೃತವಾಯಿತು. ಇನ್ನು ಜನರಲ್ ಸ್ಮಟ್ಸ್‌ರವರ ರುಜು ಬೀಳುವುದೇ ಬಾಕಿ ಇವರು ಆಗಲೇ ಭಾರತೀಯರಿಗೆ ಈ ವಸೂದೆಯನ್ನು ತೊಡೆದು ಹಾಕುವುದಿಲ್ಲವೆಂದು [illegible]

ಅಕ್ಕರ

ಸಾಮಾಜಿಕ
ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಬಾರದಿಲ್ಲ. ಬೆಲೆ ೧ ಅಣೆ. ಪೋಸ್ಟೇ ಅಣೆ. ಮುಂಗಡ ಕಳುಹಿಸಬೇಕು

ಸಿಗುವ ಸ್ಥಳ—
ಸತ್ಯವಾದಿ ಆಫೀಸ್ ಮೈಸೂರು
ಶ್ರೀ ರಾಮಚಂದ್ರ ಬುಕ್ ಡಿಪೋ
ದೇವರಾಜ ಮಾರ್ಕೆಟ್, ಮೈಸೂರು

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

ಬೇಕಾಗಿದೆ

ಸರಿಯಾದ ಸ್ಥಿತಿಯಲ್ಲಿರುವ ಸೆಕೆಂಡ್ ಹ್ಯಾಂಡ್ ಬೈಸಿಕಲ್‌ಗಳು ಬೇಕಾಗಿವೆ. ನಿವರಗಳಿಗೆ ಕೆಳಗಿರುವ ಅಡ್ರೆಸ್ಸಿಗೆ ಒಂದು ವಿಚಾರಿಸಿರಿ.

ಸತ್ಯವಾದಿ ಆಫೀಸ್,
ಚಾಮರಾಜಪುರಂ, ಮೈಸೂರು.

Opera — Manonmani
ಅಪೆರಾ

4 ನೆ ಅಮೋಘ ವಾರ

ಪಿ.ಯು.ಚಿನ್ನಪ್ಪ, ಟಿ.ಆರ್.ರಾಜಕುಮಾರಿ ಶ್ಯಾಮ, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸಕೃಷ್ಣಟಿ.ಎ. ಮಧುರಾ, ಕಾಳಿ ಎ.ಕೆ. ರತ್ನಂ, ಮುಂತಾದವರು ಪಾತ್ರ ವಹಿಸಿರುವ

ಮನೋನ್ಮಣಿ

ಪಿ. ಮಂಜಪ್ಪ ಪರ್ಚೆಂಟ್
ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬೀಡಿಗಳನ್ನೆ ಉಪಯೋಗಿಸಿ
ಹಳೇ ಅಗ್ರಹಾರ, ಮೈಸೂರು.

Edited, Printed & published by M. S. Krishna Rao, at the Satyavadi Press. [illegible]raja Agrahar, Mysore.

The
Satyavadi
Press
Printers & Binders
Chamarajapuram
Mysore

SHAKTI
SUDHA
A Panacea
for
All Debilites

ಶ್ರೀದೇವಿ ಆರ್ಟ್ಸ್

ಅಂದವಾದ ಜೋಡ್ರುಗೆಗಳು ಬರೆಯಲಡುತ್ತವೆ. ಎಲ್ಲಾ ತರಹದ ಚಿತ್ರಕೆಲಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು.
438 ಚಾಮರಾಜರೋಡ್, ಮೈಸೂರು

ಶಕ್ತಿ ಸಾಧನೆಗೆ
ಸುಲಭೋಪಾಯವು

ಶಕ್ತಿ ಸುಧಾ
ಸೇವನೆ ಎಂಬುವುದು
ನಿಮ್ಮ ಜ್ಞಾಪಕದಲ್ಲಿರಲಿ

ಬೇಕಾಗಿದ್ದಾರೆ

ಮೈಸೂರಿನ ಎಲ್ಲಾ ಕಡೆಗಳಲ್ಲಿಯೂ ಪತ್ರಿಕೆಯನ್ನು ಮಾರಲೂ, ಚಂದಾದಾರರಿಗೆ ಕೊಡಲೂ ಕೆಲವರು ಬೇಕಾಗಿದ್ದಾರೆ.

ಷರತ್ತುಗಳನ್ನು ಮೊಖ್ತಾ ವಿಚಾರಿಸಿ ತಿಳಿಯಬಹುದು

ಮ್ಯಾನೇಜರ್, ಸತ್ಯವಾದಿ ಪ್ರೆಸ್
ಚಾಮರಾಜಪುರಂ, ಮೈಸೂರು.